
# ಬೆಳಕಿನ ಸಂಚಲನ

ಸಂ 2, ಸಂ 8 ಡಿಸೆಂಬರ್ 2014



## ಗುರೂಜಿ ಕೃಷ್ಣಾನಂದ (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಠಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಏಳುವಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ.
- ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ಕೊಡುಗೆಯನ್ನು ಕೊಡಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

**ಅನು: ಶ್ರೀದೇವಿ**

(ಅವರ ಭಾಷಣದ ಆಯ್ದ ಭಾಗಗಳು)

ಒಬ್ಬ ವ್ಯಕ್ತಿ ಮೊದಲ ಬಾರಿಗೆ ಲೈಟ್ ಚಾನಲ್ ಮಾಡಲು ಪ್ರಾರಂಭಿಸಿದರು. ತಮ್ಮ ಶರೀರದಲ್ಲಿ ಬೆಳಕು ಹಾದು ಹೋಗುತ್ತಿರುವುದನ್ನು ಮಾತ್ರವಲ್ಲದೆ ಇಡೀ ಭೂಮಿಯು ಬೆಳಕಿನಿಂದ ಆವರಿಸಿದ್ದನ್ನು ಅವರು ಕಂಡರು. ಇದು ಸಾಧ್ಯ. ಅವರು ಸೂಕ್ಷ್ಮಗ್ರಾಹಿಯಾಗಿರಬಹುದು. ಈ ಅಭ್ಯಾಸ ಮಾಡುವುದರಲ್ಲಿ ಅವರಿಗೆ ಬಹಳವಾದ ಪ್ರೀತಿ ಇದೆ. ಯಾವುದೇ ಅಭ್ಯಾಸವನ್ನು ಪ್ರೀತಿಯಿಂದ ಮಾಡಿ, ಯಾವುದೇ ಪ್ರಯತ್ನವನ್ನು ಪ್ರೀತಿಯಿಂದ ಮಾಡಿ, ಯಾವುದೇ ಸಂಬಂಧವನ್ನು ಪ್ರೀತಿಯಿಂದ ಕಾಣಿರಿ, ಆಗ ಅದ್ಭುತವಾದ ಫಲಿತಾಂಶಗಳನ್ನು ಕಾಣುವಿರಿ. ಪ್ರಥಮ ಪ್ರಯತ್ನದಲ್ಲೇ ಅವರು ಬೆಳಕನ್ನು ನೋಡಲು ಸಾಧ್ಯವಾದದ್ದು ಅತ್ಯಾಶ್ಚರ್ಯವೆನಿಸುತ್ತದೆ. ಇಂತಹ ಪ್ರಸಂಗಗಳು ನಮ್ಮೆಲ್ಲರನ್ನು ಸಂತೋಷಗೊಳಿಸುತ್ತವೆ. ನಮಗೆ ಸಮರ್ಥನೆ ಬೇಕಿಲ್ಲ. ಬೆಳಕು ಇರುವುದು ನಮಗೆ ತಿಳಿದಿದೆ. ಬೆಳಕನ್ನು ಚಾನಲ್ ಮಾಡಿದಾಗ ಅದು ಹರಡುತ್ತದೆ. ನಮಗೆ ಪುರಾವೆಯ ಅಗತ್ಯವಿಲ್ಲದಿದ್ದರೂ, ಪ್ರತಿ ಬಾರಿ ಯಾರಿಗಾದರೂ ಇಂತಹ ಅನುಭವವಾದಾಗ ನಮಗೆ ಹೊಸ ಸಂತಸವನ್ನು ನೀಡುತ್ತದೆ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ಚೆನ್ನೈನಲ್ಲಿನ ಶಾಲೆಯೊಂದರ ಅಧಿಕಾರಿಗಳು ಆ ಶಾಲಾ ಆವರಣದ ಸುತ್ತಮುತ್ತ ಆಗಿರುವ ಅದ್ಭುತವಾದ ಬದಲಾವಣೆಗಳನ್ನು ನಮ್ಮೊಡನೆ ಹಂಚಿಕೊಂಡರು. ಕಳೆದ ಮೂರು ವರ್ಷಗಳಿಂದ ಶಾಲಾ ಮಕ್ಕಳು ಮತ್ತು ಶಿಕ್ಷಕರು ನಿಯತವಾಗಿ ಲೈಟ್ ಚಾನಲ್ ಮಾಡುತ್ತಿರುವುದರಿಂದ ಇದು ಸಾಧ್ಯವಾಯಿತೆಂದು ಅವರು ನಂಬಿದ್ದಾರೆ. ಜನರು ಪ್ರತಿದಿನ ಸುರಿಯುತ್ತಿದ್ದ ಕಸದ ರಾಶಿಗಳಿಂದ ಆ ಶಾಲೆಯು ಸುತ್ತುವರೆದಿತ್ತು ಹಾಗೂ ಒಂದು ಅಂಗಡಿಯು ಸರಾಯಿಯನ್ನು ಮಾರುತ್ತಿತ್ತು. ಆ ಶಾಲಾ ಮಕ್ಕಳು ಮತ್ತು ಶಿಕ್ಷಕರು ಲೈಟ್ ಚಾನಲ್ ಮಾಡಲು ಪ್ರಾರಂಭಿಸಿದಾಗ ಕ್ರಮೇಣವಾಗಿ ಕಸದ ರಾಶಿಗಳನ್ನು ತೆಗೆಯಲಾಯಿತು ಮತ್ತು ಆ ಸರಾಯಿ ಅಂಗಡಿಯು ಮುಚ್ಚಲ್ಪಟ್ಟಿತು. ಈಗ, ಆ ಶಾಲೆಯ ಆವರಣದ ಸುತ್ತಲಿನ ಪ್ರದೇಶ ಸ್ವಚ್ಛವಾಗಿದೆ ಹಾಗೂ ಮಕ್ಕಳು ಶುದ್ಧವಾದ ಗಾಳಿಯನ್ನು ಉಸಿರಾಡಬಹುದಾಗಿದೆ.

ಇತ್ತೀಚಿನ ದಿನಗಳಲ್ಲಿ ದಿನಪತ್ರಿಕೆಗಳು ಹಾಗೂ ಟಿವಿ ವಾರ್ತೆಗಳು ಅನ್ಯಾಯ ಮತ್ತು ಹಿಂಸೆಯ ವಾರ್ತೆಗಳಿಂದ ತುಂಬಿರುವಾಗ, ಚೆನ್ನೈನಲ್ಲಿನ ಈ ಶಾಲೆ ಹಂಚಿಕೊಂಡ ಅನುಭವವು, ಈ ಪ್ರಪಂಚ ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಬೆಳಕಿನಲ್ಲಿದೆ ಎನ್ನುವ ಭರವಸೆ ಹಾಗೂ ಆಶ್ವಾಸನೆಯನ್ನು ನಮಗೆ ನೀಡುತ್ತದೆ. ಈ ಶಾಲಾ ಮಕ್ಕಳು ಮತ್ತು ಅಧಿಕಾರಿಗಳು ಮಾಡಿದ ರೀತಿಯಲ್ಲಿಯೇ ಜನರು ಬೆಳಕನ್ನು ಆಯ್ಕೆ ಮಾಡಿಕೊಂಡು ಉಪಯೋಗಿಸಿಕೊಳ್ಳಬೇಕು. ಹಾಗೂ ಹೆಚ್ಚು ಹೆಚ್ಚು ಜನರು ಈ ಸದ್ದಿಲ್ಲದ ಬೆಳಕಿನ ಕ್ರಾಂತಿಯನ್ನು ಸೇರಬೇಕು.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

ಮತ್ತೊಂದು 'ವಿಶ್ವ ಚಾನಲ್ಸ್ ದಿನ', ಭೂತಾಯಿಯ ಮೇಲೆ ಪ್ರೀತಿ, ಶಾಂತಿ ಹಾಗೂ ಸಂಮೃದ್ಧಿಯನ್ನು ಹರಡಲು ಇನ್ನೊಂದು ಅವಕಾಶ. ಇದು ಆನಂದ ಮತ್ತು ಸಂಭ್ರಮದ ದಿನ. ಈ ದಿನವನ್ನು ಯಶಸ್ವಿಗೊಳಿಸಲು ಪ್ರತಿ ವರ್ಷ ನೂರಾರು ಕಾರ್ಯಕರ್ತರು ತಂಡದಲ್ಲಿ ಒಂದಾಗಿ ಸೇರುತ್ತಾರೆ. ಈ ದಿನದಂದು, ಸಾವಿರಾರು ಶಾಲೆಗಳು ಸ್ವಯಂಪ್ರೇರಣೆಯಿಂದ ಸೇರಿ 'ವಿಶ್ವ ಚಾನಲ್ಸ್ ದಿನ'ವನ್ನು ಒಂದು ಸ್ಮರಣೀಯ ದಿನವನ್ನಾಗಿಸುತ್ತಾರೆ.

ಎಂದಿನಂತೆಯೆ, ನಮ್ಮ ಕಾರ್ಯಕರ್ತರು ನಿಸ್ವಾರ್ಥದಿಂದ ಕೆಲಸ ಮಾಡುತ್ತಿದ್ದಾರೆ. ಶಾಲೆಗಳಿಂದ ಅನುಮತಿ ಪಡೆಯಲು ಹಾಗೂ ಈ ದಿನದ ಬಗ್ಗೆ ಅರಿವು ಮೂಡಿಸಲು ಅವರು ತಮ್ಮ ಸಮಯ ಹಾಗೂ ಶಕ್ತಿಯನ್ನು ವ್ಯಯಿಸುತ್ತಿದ್ದಾರೆ. ಅವರ ಪ್ರೀತಿ ಮತ್ತು ಸಮರ್ಪಣೆಗಳು ಲೈಟ್ ಚಾನಲಿಂಗ್ ಕೆಲಸದ ಆಸ್ತಿಗಳಾಗಿವೆ. ಅವರು ದಿವ್ಯವಾದ ಆತ್ಮಗಳು ಎಂದು ನಾನು ಭಾವಿಸುತ್ತೇನೆ.

ನಾವೆಲ್ಲರೂ ಒಟ್ಟಿಗೆ ಕೆಲಸ ಮಾಡಿ 'ವಿಶ್ವ ಚಾನಲ್ಸ್ ದಿನ'ದಂದು ಅತಿ ಹೆಚ್ಚು ಬೆಳಕನ್ನು ಕೆಳಗೆ ತರೋಣ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು–560077 ಭಾರತ.
ಫೋನ್ : (080) 2846 5280, 99000 75280 (10 AM to 4 PM)
ಇ–ಮೇಲ್ : info@lightagemasters.com info@lightchannels.com
ವೆಬ್‌ಸೈಟ್ : www.lightagemasters.com www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಿಲ್ಲ.

**ಬೆಂಗಳೂರು**

ಸೋಮವಾರದಿಂದ ಶುಕ್ರವಾರದವರೆಗೆ
(ಸಂಜೆ 7:00 - 7:15)
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ,
ಮಲ್ಲೇಶ್ವರಂ
☎ 9084121545 ಶ್ರೀ ಚಂದ್ರಶೇಖರ್

ಸೋಮವಾರ (ಸಂಜೆ 6:30 - 7:00)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಬುಧವಾರ (ಸಂಜೆ 6:30 - 7:00)
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಗುರುವಾರ (ಸಂಜೆ 6:30 - 7:00)
ಮಂಚ್‌ಕಿನ್ಸ್, ನಂ. 890, 38ನೇ ಅಡ್ಡರಸ್ತೆ,
20ನೇ ಮುಖ್ಯರಸ್ತೆ,
4ನೇ 'T' ಬ್ಲಾಕ್, ಜಯನಗರ
☎ 9902025444 ಶ್ರೀಮತಿ ಶುಭ ಎಸ್.
.
ಶುಕ್ರವಾರ (ಸಂಜೆ 6:30 - 7:00)
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ,
ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ. ಭೋಸೆಕರ್

ಶನಿವಾರ (ಸಂಜೆ 6:30 - 7:00)
ಬಲಮುರಿ ಮಹಾಗಣಪತಿ, 8ನೇ ಅಡ್ಡರಸ್ತೆ,
ಹೊಯ್ಸಳ ವೃತ್ತದ ಬಳಿ,
ಕೆಂಗೇರಿ ಸೆಟಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಶನಿವಾರ (ಸಂಜೆ 6:00 - 7:00)
ಶಿಕ್ಷಾ ಸಾಗರ್ ಪ್ರೈಮರಿ ಶಾಲೆ, ನಂ. 77,
5ನೇ ಮುಖ್ಯ ರಸ್ತೆ, ಪೋಸ್ಟಲ್ ಕಾಲೋನಿ,
ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್

ಶನಿವಾರ (ಸಂಜೆ 7:30 - 8:30)
ಗುರುದ್ವಾರ ಸಾಹಿಬ್,
ಆಂಜನೇಯ ದೇವಸ್ಥಾನದ ಎದುರು,
ಅಶ್ವತ್ಥ ನಗರ ಮುಖ್ಯ ರಸ್ತೆ,
ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್



ಬೆಂಗಳೂರಿನ ನಮ್ಮ ಕೂಕ್ ಟೌನ್ ಲೈಟ್ ಚಾನಲಿಂಗ್ ಕೇಂದ್ರದ 2ನೇ ವರ್ಷದ ವಾರ್ಷಿಕೋತ್ಸವದ ದಿನದಂದು ಅಲ್ಲಿನ ನಿವಾಸಿಗಳು ಮತ್ತು ಕಾರ್ಯಕರ್ತರು ಲೈಟ್ ಚಾನಲ್ ಮಾಡುತ್ತಿರುವುದು.

## ಪ್ರಮುಖ ಘಟನೆಗಳು

- ಜನವರಿ 31, 2014, ನಾಲ್ಕನೇ ವಿಶ್ವ ಚಾನಲ್ಸ್ ದಿನ – ಭಾರತದಾದ್ಯಂತ 2100 ಶಾಲೆಗಳ 10 ಲಕ್ಷಕ್ಕೂ ಹೆಚ್ಚು ಮಕ್ಕಳು ಮತ್ತು ಶಿಕ್ಷಕರು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಜೂನ್ 29, 2013 - ಬೆಂಗಳೂರು, ಮೈಸೂರು, ಹೈದ್ರಾಬಾದ್, ಸಾಂಗ್ಲಿಯಲ್ಲಿನ 30 ಶಾಲೆಗಳಲ್ಲಿ ಮತ್ತು ಭಾರತದಾದ್ಯಂತ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ 13,449 ಮಕ್ಕಳು ಲೈಟ್ ಚಾನಲಿಂಗ್ ಮಾಡಿದರು.
- ಫೆಬ್ರವರಿ 1, 2013, ಮೂರನೇ ವಿಶ್ವ ಚಾನಲ್‌ಗಳ ದಿನ – ಭಾರತದಾದ್ಯಂತ 1868 ಶಾಲೆಗಳ ಸುಮಾರು 8.86 ಲಕ್ಷ ಮಕ್ಕಳು ಮತ್ತು ಅಧ್ಯಾಪಕರು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಮೇ 7, 2012 – ಬೆಂಗಳೂರಿನ ಚೌಡಯ್ಯ ಸ್ಮಾರಕ ಭವನದಲ್ಲಿ ಆಯೋಜಿಸಿದ್ದ ಲೈಟ್ ಚಾನಲ್‌ಗಳ ಸಮಾವೇಶದಲ್ಲಿ ಸುಮಾರು ಒಂದು ಸಾವಿರ ಜನರು ಸೇರಿದ್ದರು. ಪ್ರಪಂಚದಾದ್ಯಂತ ಸಾವಿರಾರು ಜನರು ವೆಬ್‌ಕಾಸ್ಟ್ ಮತ್ತು ಮನೋಸಂಪರ್ಕಗಳ ಮೂಲಕ ತಮ್ಮ ತಮ್ಮ ಸ್ಥಳದಿಂದಲೇ ಭಾಗವಹಿಸಿ 15 ನಿಮಿಷಗಳ ಕಾಲ ಲೈಟ್ ಚಾನಲ್ ಮಾಡಿದರು.
- ಫೆಬ್ರವರಿ 1, 2012, ವಿಶ್ವ ಚಾನಲ್‌ಗಳ ದಿನ – ನೂರಾರು ಶಾಲೆಗಳ 6 ಲಕ್ಷಕ್ಕೂ ಹೆಚ್ಚು ಮಕ್ಕಳು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಜನವರಿ 18, 2012 – ಬೆಂಗಳೂರು, ಪುಣೆ, ಚೆನ್ನೈ ಮತ್ತು ಮಂಗಳೂರಿನ 11, 570 ಮಕ್ಕಳು 16 ವಿವಿಧ ಸೆಷನ್‌ಗಳಲ್ಲಿ ಲೈಟ್ ಚಾನಲ್ ಮಾಡಿದರು.
- ಫೆಬ್ರವರಿ 1, 2011, ವಿಶ್ವ ಚಾನಲ್‌ಗಳ ದಿನ – 130 ಸ್ವಯಂಸೇವಕರು ಭಾರತದಾದ್ಯಂತ ಸುಮಾರು 600 ಶಾಲೆಗಳಲ್ಲಿನ 4 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಲೈಟ್ ಚಾನಲಿಂಗ್ ಅಭ್ಯಾಸ ಮಾಡಿಸಿದರು.
- ಫೆಬ್ರವರಿ 1, 2010 – 50 ಕ್ಕೂ ಹೆಚ್ಚು ಸ್ವಯಂಸೇವಕರ ತಂಡವೊಂದು ದಕ್ಷಿಣ ಭಾರತದ 50 ಶಾಲೆಗಳನ್ನು ಸಂಪರ್ಕಿಸಿ ಸುಮಾರು 30,000 ಮಕ್ಕಳಿಂದ ಲೈಟ್ ಚಾನಲಿಂಗ್ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನಕ್ಕೆ ಭಾರಿ ಚಾಲನೆ ನೀಡಿದರು.

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | |
|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | 4801 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | 26.60 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | 1240 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 5.34 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

## ಸಂಬಂಧಗಳನ್ನು ಬೆಳೆಸುವುದು

**ಕಾರ್ತಿಕ್ ಎನ್**

ನಾನು ಮಗುವಾಗಿದ್ದಾಗ ನನ್ನ ಪ್ರಪಂಚ ಕೆಲವು ಜನರಿಗೆ ಸೀಮಿತವಾಗಿತ್ತು–ನನ್ನ ತಂದೆತಾಯಿಗಳು, ಸಹೋದರ ಸಹೋದರಿಯರು, ಕೆಲವು ಗೆಳೆಯರು ಹಾಗೂ ಕೆಲವು ಶಿಕ್ಷಕರು. ಸರಳತೆ ಮತ್ತು ಸಂತೋಷ ನನ್ನ ಚಿಕ್ಕ ಪ್ರಪಂಚವನ್ನು ಆವರಿಸಿತ್ತು. ನಾನು ಬೆಳೆದಂತೆ ಇನ್ನೂ ಅನೇಕರು ನನ್ನ ಜೀವನದಲ್ಲಿ ಪ್ರವೇಶಿಸಿದರು. ಕೆಲವರನ್ನು ನಾನು ಆಯ್ಕೆಮಾಡಿಕೊಂಡೆ, ಮತ್ತೆ ಕೆಲವರು ಅವರಾಗಿಯೇ ಪ್ರವೇಶಿಸಿದರು. ಸಮಯ ಕಳೆದಂತೆ, ಹೊಸ ಸವಾಲುಗಳು ಹುಟ್ಟಿಕೊಂಡವು ಹಾಗೂ ಜನರ ಜೊತೆಗಿನ ಸಂಬಂಧಗಳು ಸಂಕೀರ್ಣವಾಗತೊಡಗಿದವು!

ಮಾನವ ಸಂಬಂಧಗಳು ಬಹುಶಃ ಈ ಭೂಮಿಯ ಮೇಲಿನ ಜೀವನದ ಅತಿ ಸುಂದರವಾದ ಅಂಶಗಳು. “ಮಾನವ ಸ್ವಾಭಾವಿಕವಾಗಿ ಒಬ್ಬ ಸಂಘಜೀವಿ” ಎಂದು ಐತಿಹ್ಯದ ಗ್ರೀಕ್ ತತ್ವಜ್ಞಾನಿ ಅರಿಸ್ಟಾಟಲ್ ಹೇಳಿದ್ದಾರೆ. ಸಂಘಜೀವನ ಈ ಜೀವನದ ವೈವಿಧ್ಯತೆಯನ್ನು ನಮಗಾಗಿ ತೆರೆದಿಡುತ್ತದೆ. ಸಂಘಜೀವನ ನಡೆಸಲು ನಮ್ಮ ಸುತ್ತಲು ಬೇರೆ ಮನುಷ್ಯರು ಇಲ್ಲದೇ ಹೋಗಿದ್ದರೆ, ಜೀವನ ಇಷ್ಟೊಂದು ಆಕರ್ಷಕವಾಗಿ ಹಾಗೂ ಸ್ವಾರಸ್ಯಕರವಾಗಿರುತ್ತಿರಲಿಲ್ಲವೇನೋ!

ಪ್ರಕೃತಿಯಲ್ಲಿನ ಗಿಡಗಳು, ಹಕ್ಕಿಗಳು, ನದಿಗಳು, ಬೆಟ್ಟಗಳು, ಆಕಾಶ ಇವುಗಳ ಒಡನಾಟ ಹಾಗೂ ಕುಟುಂಬ, ಗೆಳೆಯರು ಮತ್ತು ಅಪರಿಚಿತರ ಜೊತೆಗಿನ ಒಡನಾಟ ನಮ್ಮ ಪ್ರತಿನಿತ್ಯದ ಜೀವನದ ಭಾಗಗಳು. ಇತರರ ಜೊತೆಗಿನ ಈ ಒಡನಾಟ ಮಹದಾನಂದ ಮತ್ತು ಸಂತೃಪ್ತಿಯನ್ನು ಕೊಡಬಹುದು ಹಾಗೂ ನಮ್ಮಲ್ಲಿ ನಿಗೂಢವಾಗಿರುವ ಮಾನವೀಯ ಮತ್ತು ದೈವೀಗುಣಗಳನ್ನು ಪ್ರಕಟಗೊಳಿಸಲು ಸ್ಫೂರ್ತಿ ನೀಡಬಹುದು. ಈ ಒಡನಾಟಗಳು ಅಸಂತೋಷ ಮತ್ತು ಒಳಗಿನ ಘರ್ಷಣೆಗಳಿಗೆ ಕಾರಣವಾಗುವಂತಹ ಅನಪೇಕ್ಷಿತವಾದ ರೀತಿಯಲ್ಲಿ ಯೋಚಿಸಲು ಮತ್ತು ಕಾರ್ಯವೆಸಗಲು ಪ್ರಚೋದಿಸಲೂಬಹುದು.

ಸಂಗಶೀಲತೆ ಸಮಾಜಕ್ಕೆ ಪ್ರಗತಿಶೀಲವಾಗಿರಬೇಕು. ಸಮಾಜದ ಎಲ್ಲಾ ಸದಸ್ಯರಿಗೂ ಅಧ್ಯಾತ್ಮಿಕವಾಗಿ ಮತ್ತು ಲೌಕಿಕವಾಗಿ ಬೆಳೆಯಲು ಅನುಕೂಲ ಒದಗಿಸಿ ಕೊಡುವಂತಿರಬೇಕು. ಪ್ರೀತಿ, ನಂಬಿಕೆ, ಸ್ವಾತಂತ್ರ್ಯ, ಸಂತೋಷ, ಹಂಚಿಕೊಳ್ಳುವಿಕೆ ಹಾಗೂ ಇತರೆ ಸಕಾರಾತ್ಮಕ ಮೌಲ್ಯಗಳು ಪ್ರತಿ ಸಮಾಜದ ತಳಹದಿಯಾಗಬೇಕು. ಅದು ಈ ರೀತಿಯಾಗಿಯೇ ಇರಬೇಕಾಗಿರುವುದು.

ಆದರೆ ಇತಿಹಾಸದುದ್ದಕ್ಕೂ, ಹಾಗೂ ನಮ್ಮ ಪ್ರಸಕ್ತ ಜೀವನದಲ್ಲಿ ಕೂಡ, ಜನರ, ಸಮಾಜಗಳ ಮತ್ತು ರಾಷ್ಟ್ರಗಳ ನಡುವೆ ತೀವ್ರವಾದ ಘರ್ಷಣೆಗಳನ್ನು ಕಾಣುತ್ತೇವೆ. ಜನರನ್ನೊಳಗೊಂಡಿರುವ ಅಹಿತಕರವಾದ ಸನ್ನಿವೇಶಗಳನ್ನು ಸಹ ನಾವು ಕಾಣುತ್ತೇವೆ. ಸಂಬಂಧಗಳು ಉತ್ತಮವಾಗಿಲ್ಲದೇ ಹೋದರೆ, ಅವು ಕೋಪ, ಅಸೂಯೆ, ಹಿಂಸೆ ಹಾಗೂ ಇನ್ನೂ ಅನೇಕ ಅಪ್ರಿಯವಾದ ಭಾವನೆಗಳಿಗೆ ದಾರಿ ಮಾಡಿಕೊಡುತ್ತವೆ. ಜೀವನ ಕ್ಷೋಭೆಗೊಳ್ಳುತ್ತದೆ ಹಾಗೂ ಜೀವನದ ಆನಂದವನ್ನು ನಾವು ಕಳೆದುಕೊಳ್ಳಬಹುದು. ನಮ್ಮಲ್ಲಿ ಅನೇಕರು ವಿರಸದ ಸಂಬಂಧಗಳ ಕಾರಣ ಬಹಳಷ್ಟು ಒತ್ತಡಕ್ಕೆ ಒಳಗಾಗುತ್ತೇವೆ. ಈ ಸವಾಲುಗಳನ್ನು ಎದುರಿಸಲು, ಅನೇಕ ಸಂದರ್ಭಗಳಲ್ಲಿ ನಮ್ಮ ಪ್ರಾಮಾಣಿಕತೆ ಮತ್ತು ಒಳ್ಳೆಯತನದ ಜೊತೆಗೆ ದೃಢತೆಯನ್ನೂ ಸೇರಿಸಬೇಕಾಗುತ್ತದೆ. ಅನೇಕರು ದೃಢತೆಯ ಸೂಕ್ಷ್ಮ ಅಂಶಗಳನ್ನು ಅರ್ಥ ಮಾಡಿಕೊಳ್ಳದೆ ಕಠಿಣ ಹಾಗೂ ಹಿಂಸಾತ್ಮಕವಾಗಿ ನಡೆದುಕೊಳ್ಳುತ್ತಾರೆ. ಮಾನವ ಸಂಬಂಧಗಳಿಂದ ಉಂಟಾಗುವ ಸವಾಲುಗಳನ್ನು ಹೇಗೆ ಎದುರಿಸಬೇಕೆನ್ನುವುದು ತಿಳಿಯದೇ ಇರುವುದು ನಮ್ಮ ಜೀವನದಲ್ಲಿ ಹಾಗೂ ಸಮಾಜದಲ್ಲಿ ಅನೇಕ ಅವ್ಯವಸ್ಥೆಗಳನ್ನು ಉಂಟುಮಾಡಿದೆ.

ಬೆಳಕಿನ ಜೊತೆ ಸಂಪರ್ಕ ಏರ್ಪಡಿಸಿಕೊಳ್ಳುವುದು ಹಾಗೂ ಬೆಳಕನ್ನು ಅನುಭವಿಸುವುದು ನಮಗೆ ಇಲ್ಲಿ ಸಹಾಯ ಮಾಡುತ್ತವೆ. ಬೆಳಕಿನ ಜೊತೆ ಸಂಪರ್ಕವೇರ್ಪಟ್ಟಾಗ, ಅದರ ಅಸ್ತಿತ್ವವಾದ ಆ ದಿವ್ಯ ಮೂಲವನ್ನು ನಾವು ಸಂಪರ್ಕಿಸುತ್ತೇವೆ. ಈ ಮಹಾನ್ ಚೈತನ್ಯ, ಬುದ್ಧಿ, ಪ್ರೀತಿ ಹಾಗೂ ವಿವೇಕವನ್ನು ಹೊಂದಿದೆ. ಇದು ನಮ್ಮ ಒಳ್ಳೆಯತನವನ್ನು ಉಳಿಸಿಕೊಂಡು ದೃಢತೆಯಿಂದ ಇರಲು ನಮಗೆ ಅವಶ್ಯವಿರುವ ಸಾಮರ್ಥ್ಯ, ಜ್ಞಾನ ಹಾಗೂ ಪರಿಪಕ್ವತೆಯನ್ನು ಕೊಡುತ್ತದೆ. ನಮ್ಮ ಸುತ್ತಲಿರುವ ಜನರೊಂದಿಗೆ ಗೊಂದಲವಿಲ್ಲದ ಹಾಗೂ ಸಮರಸದ ಜೀವನಕ್ಕೆ ಇದು ಮಾರ್ಗದರ್ಶನ ನೀಡುತ್ತದೆ. ಇದು ಸತ್ಯವಿರಲಾರದು ಅನ್ನಿಸುವಷ್ಟು ಸರಳವಾಗಿ ಕಾಣಿಸುತ್ತದೆ! ಆದರೆ, ಹೌದು ಈ ಬೆಳಕನ್ನು ಅನುಭವಿಸಲು ಪಯತ್ನ ಪಟ್ಟ ಪರಿಶುದ್ಧರಾದ ಮಕ್ಕಳು ಮತ್ತು ಪ್ರಾಮಾಣಿಕರಾದ ವಯಸ್ಕರು ಇದರ ಪರಿವರ್ತಿಸುವ ಪರಿಣಾಮಗಳನ್ನು ದೃಢೀಕರಿಸಬಲ್ಲರು.

ಬೆಳಕು ಮತ್ತು ದೇವರ ಜೊತೆ ಸಂಬಂಧ ಬೆಳೆಸಲು ಲೈಟ್ ಚಾನಲಿಂಗ್ ಮೂಲಕ ಸರಳವಾದರೂ ಮಹತ್ವಪೂರ್ಣವಾದ ಹೆಜ್ಜೆಗಳನ್ನಿಡುತ್ತೇವೆ.

ಬೆಳಕಿನ ಜೊತೆ ಸಂಬಂಧ ಬೆಳೆಸೋಣ ಹಾಗೂ ನಮ್ಮ ಎಲ್ಲಾ ಸಂಬಂಧಗಳನ್ನು ದೈವೀಕರಿಸಲು ಬೆಳಕಿಗೆ ಅವಕಾಶ ಮಾಡಿಕೊಡೋಣ. ಬೆಳಕಿನ ಜೊತೆಗಿನ ಸಂಬಂಧ ವೃದ್ಧಿಸಿಕೊಳ್ಳುವುದನ್ನು ನಾವು ಮುಂದುವರೆಸಿದಂತೆಲ್ಲಾ, ನಮ್ಮೊಳಗಿರುವ ಹಾಗೂ ಸಮಾಜದಲ್ಲಿರುವ ಅಸಾಮರಸ್ಯ ಹಾಗೂ ಘರ್ಷಣೆಗಳನ್ನು ನಿಧಾನವಾಗಿ ತೆಗೆದು ಹಾಕುತ್ತೇವೆ. ನಾವು ಸದ್ದಿಲ್ಲದೆ ಹೊಸ ಯುಗವನ್ನು ಸ್ಥಾಪಿಸುತ್ತಿರುತ್ತೇವೆ! ■

## ಲೈಟ್ ಚಾನಲಿಂಗ್ ಕೇಂದ್ರಗಳು

### ಮೈಸೂರು
ಬುಧವಾರ (ಸಂಜೆ 6)
ಇನ್ಫೋಸಿಸ್ ಲಿ, ಹೆಬ್ಬಾಳ್ ಎಲೆಕ್ಟ್ರಾನಿಕ್ಸ್ ಸಿಟಿ,
ಹೂಟಗಳ್ಳಿ, ಮೈಸೂರು-570018
☎ 9980837179, ಶ್ರೀ ಆನಂದ್ ನಿರಂಜನ್
☎ 8095026224, ಶ್ರೀ ಆಕಾಶ್ ಮಲ್ಲಿಕ್

### ಸೋಲಾಪೂರ್
ಪ್ರತಿದಿನ (ಸಂಜೆ 7:00 - 7:30)
ಬಾಲಗಣೇಶ್ ಮಂದಿರ, ಬುಶರ್ ಪೇಠ್,
ಮೊಹೋಲ್
☎ 09860967066, ಶ್ರೀ ವಿವೇಕಾನಂದ ಸ್ವಾಮಿ
☎ 09970800279, ಶ್ರೀಮತಿ ಸ್ವರೂಪ ಸ್ವಾಮಿ

### ಚೆನ್ನೈ
ಭಾನುವಾರ (ಬೆಳಿಗ್ಗೆ 10:00 -10:30)
ನಂ. 481, ಸಾಯಿಪ್ರೇಮ್, 19 ನೇ ರಸ್ತೆ,
4ನೇ ಸೆಕ್ಟರ್, ಕೆ.ಕೆ. ನಗರ
☎ 9444880409, ಶ್ರೀಮತಿ ರಾಜಲಕ್ಷ್ಮಿ ಆರ್.



### ತಿರುನಲ್ವೇಲಿ
ಪ್ರತಿ ದಿನ (ಸಂಜೆ 7:00 - 7:30)
ವಡಕ್ಕು ತೆರು, ಚೆಲ್ಲಾ ಪಿಳ್ಳೈಯಾರ್ ಕುಲಮ್
ಎ.ಪಿ. ನಾದನೂರ್ ಪೋಸ್ಟ್
ಆಲಂಗುಲಮ್ ತಾಲ್ಲೂಕು - 627423
☎ 9444458747, ಶ್ರೀ ಮಾರಿಯಪ್ಪನ್ ಎನ್.

### ಪುಣೆ
ಶನಿವಾರ (ಸಂಜೆ 6:30 - 7:00)
3 B, ಕಪಿಲ ಹೌಸಿಂಗ್ ಸೊಸೈಟಿ,
ಗೋಖಲೆನಗರ, ಪುಣೆ - 411016
☎ 9011038169, ಶ್ರೀ ಆಶುತೋಶ್ ನವನ್‌ಗುಲ್



ಗುರುವಾರ (ಮಧ್ಯಾಹ್ನ 2:30 - 3:00)
ಸಿಂಧಿ ಮಂದಿರ, ಸತ್ನಮ್ ಟೆಕ್ಸ್‌ಟೈಲ್ ಪಕ್ಕ,
ಶಿವಸೇನ ಕಛೇರಿಯ ಸಮೀಪ, ಉರುಲಿ ಕಾಂಚನ್,
ಹವೇಲಿ ಜಿಲ್ಲೆ, ಪುಣೆ - 412202
☎ 9822973632, ಶ್ರೀ ಗೋರಕ್ಷ್ ಮಹಾದಿಕ್

### ವಿಶಾಖಪಟ್ಟಣ
ಶನಿವಾರ (ಸಂಜೆ 7:00 - 7:30)
ಮನೆ ನಂ. 14-339/19, ಫ್ಲಾಟ್ ನಂ. 207,
ಶ್ರೀ ಮಿತ್ರ ಹೈಟ್ಸ್, ಬಾಲಾಜಿ ಗಾರ್ಡನ್,
ಗೋಪಾಲಪಟ್ನಂ, APRTC ಬಸ್ ಡಿಪೋ ಎದುರು
☎ 9848628324, ಶ್ರೀ ವಿ. ಹರಿಕೃಷ್ಣನ್

### ಮೀರಜ್
ಗುರುವಾರ (ಸಂಜೆ 7:45)
ಶ್ರೀ ಶಿವರುದ್ರ ಬಿ. ಬೆಲಗಲ್ವಿ
C/o. ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ
A-gat Plot No-135, ಸುಭಾಷ್ ನಗರ ಪೋಸ್ಟ್
☎ 9822421463, ಶ್ರೀ ಮಹಾಜನ್



## ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ಗುರೂಜಿಯವರ ಮುಖ ಮತ್ತು ಕಣ್ಣುಗಳನ್ನು ಅವರ ಫೋಟೋದಲ್ಲಿ ನೋಡುವುದರಿಂದಲೇ, ಅವರು ಬೆಳಕಿನಿಂದ ತುಂಬಿರುವುದನ್ನು ಕಾಣಲು ನನಗೆ ಸಾಧ್ಯವಾಯಿತು. ನಾನೇ ಸ್ವತಃ ಈ ಲೈಟ್ ಚಾನಲಿಂಗ್ ತಂತ್ರವನ್ನು ಅಭ್ಯಾಸ ಮಾಡಿದೆ ಹಾಗೂ ಬೆಳಕಿನ ಅನುಭವ ಪಡೆದೆ. ಆದರೆ ಈಗ ನಾನು ಇನ್ನೂ ಹೆಚ್ಚು ಗಾಢವಾಗಿ ಬೆಳಕನ್ನು ಅನುಭವಿಸಲು ಬಯಸುತ್ತೇನೆ. ನಾನು ಬೆಳಕಾಗಲು ಮತ್ತು ದೇವರ ಅನುಭವವನ್ನು ಪಡೆಯಲು ಇಚ್ಛಿಸುತ್ತೇನೆ. ಲೈಟ್ ಚಾನಲಿಂಗ್ ಸಮಯದಲ್ಲಿ ಕೆಲವು ವಿದ್ಯಾರ್ಥಿಗಳು ಅಳುತ್ತಿರುವುದನ್ನು ನೋಡಿದೆ. ಬೆಳಕು ಅವರನ್ನು ಸ್ಪರ್ಶಿಸಿದೆ ಅನಿಸುತ್ತದೆ. ಅವರಿಗೂ ಮತ್ತು ಅವರ ಕುಟುಂಬದವರಿಗೂ ಬೆಳಕಿನಿಂದ ಸಹಾಯವಾಗಲಿ ಎಂದು ಆಶಿಸುತ್ತೇನೆ.

ಗಣ್ಯ ವ್ಯಕ್ತಿಗಳ ಒಂದು ದೊಡ್ಡ ಸಮಾವೇಶದಲ್ಲಿ ಬಹಳ ಮುಖ್ಯ ವಿಷಯಗಳ ಕುರಿತಾಗಿ ನಾನು ಮಾತನಾಡಬೇಕಿತ್ತು. ನಾನು ಸ್ವಲ್ಪ ಆತಂಕಕ್ಕೆ ಒಳಗಾಗಿದ್ದೆ. ಆದರೆ ಬೆಳಕಿನ ಸಹಾಯದಿಂದ ನಾನು ನಿರರ್ಗಳವಾಗಿ ಒಂದು ಉತ್ತಮ ಭಾಷಣ ಮಾಡಲು ಸಾಧ್ಯವಾಯಿತು.

– ಸಿಸ್ಟರ್ ಲಿಯೋನಿ, ಪ್ರಿನ್ಸಿಪಾಲ್, ಸೆಂಟ್ ರಾಕ್ಸ್ ಗರ್ಲ್ಸ್ ಹೈಸ್ಕೂಲ್, ಫ್ರೇಜರ್ ಟೌನ್, ಬೆಂಗಳೂರು

ನಮ್ಮ ಶಾಲೆಯಲ್ಲಿ ಪ್ರತಿ ದಿನ ಮುಂಜಾನೆ ಮತ್ತು ಸಂಜೆ ಮೂರು ನಿಮಿಷಗಳ ಕಾಲ ಲೈಟ್ ಚಾನಲಿಂಗ್ ಅಭ್ಯಾಸ ಮಾಡುತ್ತಿದ್ದೇವೆ ಹಾಗೂ ಮುಂದಿನ ದಿನಗಳಲ್ಲೂ ಮುಂದುವರಿಸಿಕೊಂಡು ಹೋಗಲು ಇಷ್ಟಪಡುತ್ತೇವೆ. ನಮ್ಮ ಶಿಕ್ಷಕರೂ ಸಹ ಇದರಲ್ಲಿ ಭಾಗವಹಿಸುತ್ತಾರೆ. ಸಹಜವಾಗಿಯೇ ಮಕ್ಕಳು ಬಹಳಷ್ಟು ಪ್ರಯೋಜನ ಪಡೆದಿದ್ದಾರೆ. ಅವರು ತಮ್ಮ ಮನಸ್ಸುಗಳನ್ನು ಪ್ರಶಾಂತವಾಗಿರಿಸಿ, ವಿದ್ಯಾಭ್ಯಾಸದ ಕಡೆಗೆ ಗಮನ ಹರಿಸುವುದಕ್ಕೆ ಮತ್ತು ಉತ್ತಮ ವ್ಯಕ್ತಿಗಳಾಗುವುದಕ್ಕೆ ಇದು ಪ್ರಯೋಜನಕಾರಿಯಾಗಿದೆ.

– ಎಲ್ಲಾ ಶಿಕ್ಷಕರು, ಎಸ್.ವಿ.ಇ. ಹೈಯರ್ ಪ್ರೈಮರಿ ಸ್ಕೂಲ್, ಬೆಂಗಳೂರು

ಸಹಕಾರಿ ವಿದ್ಯಾ ಕೇಂದ್ರ ಪ್ರೈಮರಿ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸುಮಂಗಲರವರು ಪ್ರತಿ ದಿನ ಲೈಟ್ ಚಾನಲ್ ಮಾಡುತ್ತಿದ್ದಾರೆ. ಇತ್ತೀಚಿಗೆ ಅವರ ಮಗಳು ಮತ್ತು ಅಳಿಯ ಹೈದರಾಬಾದ್‌ಗೆ ಪ್ರಯಾಣಿಸುತ್ತಿದ್ದಾಗ, ಅವರ ಮಗಳಿಗೆ ಹೊಟ್ಟೆ ನೋವು ಉಂಟಾಯಿತು. ಅವರ ಮಗಳು ನೋವಿಲ್ಲದೆ ಸುಖಕರವಾಗಿ ಪ್ರಯಾಣಿಸಲೆಂದು ಶ್ರೀಮತಿ ಸುಮಂಗಲರವರು ತಮ್ಮ ಮಗಳಿಗೆ ಬೆಳಕನ್ನು ಕಳುಹಿಸಿದರು. ಒಂದು ಗಂಟೆಯೊಳಗಾಗಿ ಅವರ ಮಗಳು ಚೇತರಿಸಿಕೊಂಡರು ಹಾಗೂ ಸುರಕ್ಷಿತವಾಗಿ ಹೈದರಾಬಾದ್ ಸೇರಿದರು.

– ಅನಿತ, ಕಾರ್ಯಕರ್ತೆ

ಕೆಲವು ತಿಂಗಳುಗಳಿಂದ ನಾನು ಪ್ರತಿ ದಿನ ಲೈಟ್ ಚಾನಲಿಂಗ್ ಅಭ್ಯಾಸ ಮಾಡುತ್ತಿದ್ದೇನೆ. ಮೊದಲು, ನಾನು ಮೇಲಿಂದ ಮೇಲೆ ಕೋಪ ಮಾಡಿಕೊಳ್ಳುತ್ತಿದ್ದೆ. ಈಗ ನನ್ನ ಕೋಪ ಕಡಿಮೆಯಾಗಿದೆ. ಇಷ್ಟೊಂದು ಸಮಾಧಾನ ಮತ್ತು ಶಾಂತತೆ ಹೇಗೆ ಬಂತೆಂದು ನನ್ನ ತಾಯಿ ಆಶ್ಚರ್ಯದಿಂದ ಕೇಳುತ್ತಾರೆ!

– ಶ್ರೀರಾಮ್, ವಿದ್ಯಾರ್ಥಿ, ನಾರಾಯಣ ಇ–ಟೆಕ್ನೊ ಸ್ಕೂಲ್, ಬೆಂಗಳೂರು

# ವಿಶ್ವ ಚಾನಲ್ಸ್ ದಿನ
# 30ನೇ ಜನವರಿ 2015

**ಈ ದಿನ ನಿಮಗೆ ಅನುಕೂಲವಾದ ಯಾವುದೇ ಸಮಯದಲ್ಲಿ ಕನಿಷ್ಠ 3 ನಿಮಿಷಗಳ ಕಾಲ ಲೈಟ್ ಚಾನಲ್ ಮಾಡುವುದರ ಮೂಲಕ ಈ ಸಂಚಲನದಲ್ಲಿ ಭಾಗವಹಿಸಿ.**

ಇತ್ತೀಚಿನ ಮಾಹಿತಿಗಳನ್ನು ಪಡೆಯಲು, **022-61816363** ಕ್ಕೆ ಒಂದು ಮಿಸ್ಡ್ ಕಾಲ್ ಕೊಡುವುದರ ಮೂಲಕ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ.

ಬೆಳಕಿನ ಸಂಚಲನ ಕನ್ನಡ ಮಾಸಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು– 560077
ಮುದ್ರಣ ಸ್ಥಳ : ಗುಡ್ ಪ್ರಿಂಟ್ಸ್, ವೀಣಾ ಕಾಂಪ್ಲೆಕ್ಸ್, ಹಳೇ ಮದ್ರಾಸ್ ರಸ್ತೆ, ದೂರವಾಣಿನಗರ, ಬೆಂಗಳೂರು – 560 016
ಮಾಲೀಕರು : ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು – 560077 ಸಂಪಾದಕರು: ಶ್ರೀದೇವಿ